## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 58/2019

ಚಾಸಾ- 1 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 28-01-2026

| | | |
|---|---|---|
| ಹೆಸರು | : | ಸಂತೋಷ |
| ತಂದೆಯ ಹೆಸರು | : | ಅಂಬಣ್ಣ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಉಪವಲಯ ಅರಣ್ಯಾಧಿಕಾರಿ |
| ವಾಸಸ್ಥಳ | : | ಅಫಜಲಪೂರ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

2018 ರಿಂದ ಸಧ್ಯದವರೆಗೆ ಅಫಜಲಪೂರ ಉಪವಲಯದ ಅರಣ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

2018 ರ ಸಾರ್ವತ್ತಿಕ ವಿಧಾನಸಭಾ ಚುನಾವಣೆ ಪ್ರಯುಕ್ತ ಸೊನ್ನ ಚೆಕಪೋಸ್ಟ ಹತ್ತಿರ SST ಅಂತ ಕರ್ತವ್ಯಕ್ಕೆ ನಿಯೋಜನೆ ಮಾಡಿರುತ್ತಾರೆ. ದಿಃ 11-05-2018 ರಂದು ರಾತ್ರಿ 9-50 ಗಂಟೆಗೆ ನಾನು ಚಾಸಾ 3 ರಿಂದ 5 ರವರು ಕರ್ತವ್ಯದಲ್ಲಿದ್ದಾಗ ಒಂದು ವಾಹನ ತಪಾಸಣೆ ಮಾಡಿದಾಗ ಅವರಲ್ಲಿ ಸಿದ್ದಪ್ಪ ರವರ ಬಳಿ ರೂ. 20 ಸಾವಿರ ಮತ್ತು ಕೋಮಣ್ಣ ಎನ್ನುವವರ ಬಳಿ ರೂ. 49 ಸಾವಿರ ಒಟ್ಟು 69 ಸಾವಿರ ರೂ. ಗಳು ಇದ್ದವು. ಸದರಿ ಹಣಕ್ಕೆ ಸಂಬಂಧಿಸಿದ ದಾಖಲಾತಿ ವಿಚಾರಿಸಿದಾಗ ಅವರು ಗುಲ್ಬರ್ಗಾದ ಫೈನಾನ್ಸದಿಂದ ತೆಗೆದುಕೊಂಡು ಬಂದಿರುತ್ತೇವೆ ಈಗ ಹೈದ್ರಾ ದೇವಸ್ಥಾನಕ್ಕೆ ಹೋಗುತ್ತಿದ್ದೇವೆ ಎಂದು ತಿಳಿಸಿದರು. ಚುನಾವಣೆ ನಿಯಮಾವಳಿ ಪ್ರಕಾರ ಒಂದು ವಾಹನದಲ್ಲಿ ರೂ. 50 ಸಾವಿರ ಮೇಲ್ಪಟ್ಟ ಹಣವನ್ನು ತೆಗೆದುಕೊಂಡು ಹೋಗಬಾರದೆಂದು ನಿಯಮ ಇರುವುದರಿಂದ ನಾವು ಈ ವಿಷಯ ಕುರಿತು ಸಹಾಯಕ ಚುನಾವಣಾ ಆಯುಕ್ತರಿಗೆ ತಿಳಿಸಿದ್ದು ಅವರು ಪೋಲಿಸರಿಗೆ ದೂರು ನೀಡಲು

ತಿಳಿಸಿ ಮತ್ತು ಅವರ ಬಳಿ ಇರುವ ಹಣ ಜಪ್ತಿ ಪಡಿಸಿಕೊಂಡು ಪೋಲಿಸರ ವಶಕ್ಕೆ ನೀಡಲು ತಿಳಿಸಿರುತ್ತಾರೆ. ಅದರಂತೆ ನಾವು ರಾತ್ರಿ ಪೋಲಿಸ ಠಾಣೆಗೆ ದೂರು ನೀಡಲು ಹೋದಾಗ PSI ರವರು ಠಾಣೆಯಲ್ಲಿ ಇರಲಿಲ್ಲ, ಠಾಣಾಧಿಕಾರಿಯಾಗಿ ಶ್ರೀದೇವಿ ASI ರವರು ಇದ್ದು ಅವರಿಗೆ ದೂರು ಮತ್ತು ಜಪ್ತಿ ಪಡಿಸಿಕೊಂಡ ಹಣ ನೀಡಿರುತ್ತೇವೆ.

ಸಹಾಯಕ ಚುನಾವಣಾ ಅಧಿಕಾರಿಯವರ ನಿರ್ದೇಶನ ಮೇರೆಗೆ ಆ ವ್ಯಾಪ್ತಿ ಕಂದಾಯ ನಿರೀಕ್ಷಕರು ಗ್ರಾಮ ಲೆಕ್ಕಾಧಿಕಾರಿಗಳಿಗೆ ಕರೆಯಿಸಿ ಅವರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಮಾಡಿರುತ್ತೇವೆ. ಮತ್ತು ಪೋಲಿಸರಿಗೆ ಗುನ್ಹೆಸ್ಥಳವನ್ನು ತೋರಿಸಿರುತ್ತೇನೆ.

ಸಾಕ್ಷಿಗೆ ಜಪ್ತಿ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಜಪ್ತಿ ಪಂಚನಾಮೆಯನ್ನು ನಿಪಿ-**1** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ದೂರನ್ನು ನಿಪಿ-**2** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ನೋಟುಗಳು ರೂ. 200 ಮತ್ತು 500 ಮುಖಬೆಲೆಯ ನೋಟುಗಳು ಇರುತ್ತವೆ.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಖಾಕಿ ಕವರನಲ್ಲಿ ಇರುವ ಒಟ್ಟು ರೂ. 69000/- ಗಳನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **1** ಎಂದು ಗುರುತಿಸಲಾಯಿತು. ಆರೋಪಿತರಿಗೆ ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ಪರವಾಗಿ **RMS** ವಕೀಲರಿಂದಃ-</u>

ಆ ದಿನ ಬಂದ ವಾಹನ ಚಾಲಕನ ಹೆಸರು ವಿಚಾರಿಸಿಲ್ಲ. ಸದರಿ ವಾಹನವು ಯಾರಿಗೆ ಸಂಬಂಧಿಸಿದ್ದು ಎಂದು ವಿಚಾರಿಸಿಲ್ಲ. ಜಪ್ತಿ ಪಡಿಸಿಕೊಂಡರು ಎಂದು ಹೇಳುವ ನೋಟುಗಳ ಸಂಖ್ಯೆಗಳನ್ನು ಹೇಳಲು ಬರುವುದಿಲ್ಲ. ಗುನ್ಹೆಸ್ಥಳದಲ್ಲಿ ಯಾವತ್ತೂ ವಾಹನ ಸಂಚಾರ ಇರುತ್ತದೆ ಎಂದರೆ ಸಾಕ್ಷಿ ನಾವು ಜಪ್ತಿ ಮಾಡಿದಾಗ ರಾತ್ರಿ ಆಗಿತ್ತು ಎಂದು ನುಡಿಯುತ್ತಾರೆ. ಸುತ್ತಮುತ್ತಲಿನ ಲಭ್ಯ ಇದ್ದ

ಜನರಿಗೆ ಪಂಚಸಾಕ್ಷಿಯನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಗುನ್ಹೆಸ್ಥಳವನ್ನು ಮರುದಿನ ಬೆಳಿಗ್ಗೆ 9-30 ಗಂಟೆಗೆ ತೋರಿಸಿರುತ್ತೇನೆ.

ಕಚೇರಿ ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ